ಲೋಹಿಯಾ ಮೂಲಕ ಆಗಸ್ಟ್ ಕ್ರಾಂತಿಯ ಭೂಗತ ಹೋರಾಟದ ಚಿತ್ರಗಳನ್ನು ನೋಡುತ್ತಿದ್ದರೆ ಕ್ವಿಟ್ ಇಂಡಿಯಾ ಚಳುವಳಿಯ ಮತ್ತೊಂದು ಧೀರ ಚರಿತ್ರೆಯೇ ಬಿಚ್ಚಿಕೊಳ್ಳತೊಡಗುತ್ತದೆ. ಸಾಮಾನ್ಯವಾಗಿ ಯಾವುದನ್ನೂ ಉತ್ಪ್ರೇಕ್ಷಿಸದೆ ಬರೆಯುತ್ತಿದ್ದ ಲೋಹಿಯಾ ಮೂಲಕ ಕಾಣುವ ಆಗಸ್ಟ್ ಕ್ರಾಂತಿಯ ಅಥೆಂಟಿಕ್ ವಿವರಗಳು ಚರಿತ್ರೆಯ ಪುಟಗಳಲ್ಲಿ ಅಷ್ಟಾಗಿ ದಾಖಲಾಗದ ಕ್ವಿಟ್ ಇಂಡಿಯಾ ಚಳುವಳಿಯ ವಿವರಗಳನ್ನು ತೆರೆದಿಡುತ್ತವೆ.

ಕ್ವಿಟ್ ಇಂಡಿಯಾ ಚಳುವಳಿಯನ್ನು ಮುನ್ನಡೆಸಿದ ಅಜ್ಞಾತ ಗುಂಪುಗಳು; ಚರಿತ್ರೆಯ ಪುಟಗಳಲ್ಲಿ ಎಲ್ಲೂ ದಾಖಲಾಗದ ಗಂಡು ಹೆಣ್ಣುಗಳು; ಪೊಲೀಸರ ಹಿಂಸೆಗೆ ಬಲಿಯಾದ ಜನರ ತ್ಯಾಗ; ತಮ್ಮ ಜೀವ ಪಣಕ್ಕಿಟ್ಟು ಸ್ವಾತಂತ್ರ್ಯಯೋಧರನ್ನು ರಕ್ಷಿಸುತ್ತಿದ್ದ, ಅವರ ಗುಟ್ಟುಗಳನ್ನು ಕಾಯುತ್ತಿದ್ದ ನಿಷ್ಠಾವಂತ ಮಹಿಳೆಯರು, ಪುರುಷರು; ರಾತ್ರೋರಾತ್ರಿ ಕರಪತ್ರಗಳನ್ನು ಎಲ್ಲೆಡೆ ಹಂಚುತ್ತಿದ್ದ ನಿರ್ಭೀತ ತರುಣ ತರುಣಿಯರು; ಭೂಗತ ಬಾನುಲಿಯ ಮೂಲಕ ದೇಶವನ್ನು ಎಚ್ಚರದಲ್ಲಿಟ್ಟ ಧೀರರು ಇಂಥ ಅನೇಕ ಸ್ಫೂರ್ತಿದಾಯಕ ಘಟನಾವಳಿಗಳು ಲೋಹಿಯಾ ಬದುಕಿನ ಈ ಘಟ್ಟದ ಸುತ್ತ ಹೆಣೆದುಕೊಂಡಿವೆ.

ಜಗತ್ತಿನ ಸ್ವಾತಂತ್ರ್ಯ ಹೋರಾಟಗಳ ಚರಿತ್ರೆಯಲ್ಲೇ ಅನನ್ಯವಾದ 'ಕ್ವಿಟ್ ಇಂಡಿಯಾ' ಚಳುವಳಿ ದೇಶದ ಅನೇಕ ರಾಜಕೀಯ ಪಕ್ಷಗಳ ಹಲವು ಹಂತದ ನಾಯಕ, ನಾಯಕಿಯರು ಹಾಗೂ ಜನಸಾಮಾನ್ಯರು ತ್ಯಾಗ, ಬಲಿದಾನಗಳ ಮೂಲಕ ಗಳಿಸಿಕೊಟ್ಟಿರುವ ಭಾರತೀಯ ಸ್ವಾತಂತ್ರ್ಯದ ಮಹತ್ವವನ್ನು ಎತ್ತಿ ತೋರಿಸುತ್ತದೆ. ಈ ಸ್ವಾತಂತ್ರ್ಯ ಎಷ್ಟು ಅಮೂಲ್ಯವಾದುದು ಹಾಗೂ ಅದನ್ನು ನಾವು ಯಾಕೆ ಸದಾ ರಕ್ಷಿಸಿಕೊಳ್ಳುತ್ತಲೇ ಇರಬೇಕು ಎಂಬುದನ್ನು ಕ್ವಿಟ್ ಇಂಡಿಯಾದ ಮರುಕಥನದ ಮೂಲಕ ಹೊಸ ಹೊಸ ತಲೆಮಾರುಗಳಿಗೆ ನಾವು ನೆನಪಿಸುತ್ತಲೇ ಇರಬೇಕಾಗುತ್ತದೆ.

ಒಂದು ಅಂಕಿ ಅಂಶದ ಪ್ರಕಾರ, ಆಗಸ್ಟ್ ಕ್ರಾಂತಿಯಲ್ಲಿ 60229 ಜನ ಬಂಧನಕ್ಕೊಳಗಾದರು; ಡಿಫೆನ್ಸ್ ಕಾಯ್ದೆಯಡಿಯಲ್ಲಿ 18000 ಜನ ಬಂಧನಕ್ಕೊಳಗಾದರು; ಪೊಲೀಸರು, ಹಾಗೂ ಸೈನಿಕರು 940 ಜನರನ್ನು ಕೊಂದರು; 1630 ಜನ ಗಾಯಗೊಂಡರು; 44 ಜನ ಗಲ್ಲು ಶಿಕ್ಷೆ ಅನುಭವಿಸಿದರು.

ಆದರೆ ಮುಂದೊಮ್ಮೆ ಲೋಹಿಯಾ ವೈಸ್‌ರಾಯ್ ಲಿನ್‌ಲಿತ್ ಗೌಗೆ ಬರೆದ ಪತ್ರದಲ್ಲಿ 'ಬ್ರಿಟಿಷ್ ಸರ್ಕಾರ ಐವತ್ತು ಸಾವಿರಕ್ಕೂ ಹೆಚ್ಚು ದೇಶಭಕ್ತರನ್ನು ಕೊಂದಿದೆ ಹಾಗೂ ಅದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಜನರನ್ನು ಗಾಯಗೊಳಿಸಿದೆ; ನನಗೇನಾದರೂ ಪೊಲೀಸರ ಅಡೆತಡೆಯಿಲ್ಲದೆ ದೇಶದಲ್ಲಿ ಮುಕ್ತವಾಗಿ ಓಡಾಡುವ ಸ್ವಾತಂತ್ರ್ಯ ಸಿಕ್ಕರೆ ಅವರಲ್ಲಿ ಕೊನೆಯ ಪಕ್ಷ ಹತ್ತು ಸಾವಿರ ಜನರ ಮನೆಯ ವಿಳಾಸವನ್ನು ನಾನೇ ಒದಗಿಸಿಕೊಡಬಲ್ಲೆ' ಎಂದು ಬರೆದರು.

ವಾಸ್ತವ ಹೀಗಿದ್ದರೂ, ಬ್ರಿಟಿಷ್ ಸರ್ಕಾರ ಜನರ ಹಿಂಸೆಯನ್ನೇ ದೊಡ್ಡದು ಮಾಡಿ ಬಿಂಬಿಸಲೆತ್ನಿಸಿತು; ಜೊತೆಗೆ, ಜನರ ಹಿಂಸೆಯನ್ನು ಖಂಡಿಸಿ ಹೇಳಿಕೆ ನೀಡಬೇಕೆಂದು ಆಗ ಸೆರೆಮನೆಯಲ್ಲಿದ್ದ ಗಾಂಧೀಜಿಯವರ ಮೇಲೆ ಒತ್ತಡ ಹೇರಿತು. ಆದರೆ ಗಾಂಧೀಜಿ ಜನರು ಎಸಗಿದ ಹಿಂಸೆಯನ್ನು ಖಂಡಿಸಲು ನಿರಾಕರಿಸಿದರು. ಬ್ರಿಟಿಷ್ ಪ್ರಭುತ್ವ ಜನರ ಮೇಲೆ ಚೆಲ್ಲಾಡಿದ ಹಿಂಸೆ ಎಷ್ಟು ಭೀಕರವಾಗಿತ್ತೆಂದರೆ, ಅಹಿಂಸೆಯ ಪರಮ ಪ್ರತಿಪಾದಕರಾದ ಗಾಂಧೀಜಿ ಕೂಡ 'ಜನರ ಹಿಂಸೆ ಪ್ರಭುತ್ವದ ಅತಿಹಿಂಸೆಗೆ ಉತ್ತರವಾಗಿತ್ತು' ಎಂದು ನೇರವಾಗಿ ಹೇಳಿದರು.

ಆಗಸ್ಟ್ ಕ್ರಾಂತಿ ನಿಜವಾದ ಅರ್ಥದಲ್ಲಿ ಜನತಾ ಕ್ರಾಂತಿಯಾಗಿತ್ತು ಎಂಬುದನ್ನು ನೆನೆಯುತ್ತಾ ಮುಂದೆ ಆಗಸ್ಟ್ ಕ್ರಾಂತಿಯ ಬೆಳ್ಳಿ ಮಹೋತ್ಸವದ ಸಂದರ್ಭದಲ್ಲಿ ಲೋಹಿಯಾ ಬರೆದರು:

'ಆಗಸ್ಟ್ 9, 1942 ಜನರ ಸಂಕಲ್ಪವನ್ನು ವ್ಯಕ್ತಪಡಿಸಿತು: ನಾವು ಸ್ವತಂತ್ರರಾಗಬಯಸುತ್ತೇವೆ ಮತ್ತು ಸ್ವತಂತ್ರರಾಗುತ್ತೇವೆ ಎಂಬ ಸಂಕಲ್ಪ ಅದು. ನಮ್ಮ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಕೋಟಿಗಟ್ಟಲೆ ಜನರು ಸ್ವತಂತ್ರರಾಗುವ ಆಸೆಯನ್ನು ವ್ಯಕ್ತಪಡಿಸಿದರು. ಕೆಲವು ಸ್ಥಳಗಳಲ್ಲಿ ಇದನ್ನು ಸಾಕಷ್ಟು ಬಲಯುತವಾಗಿಯೇ ವ್ಯಕ್ತಪಡಿಸಲಾಯಿತು. ಬಲ್ಲಿಯಾ ಎಂಬ ಜಿಲ್ಲೆ ಕೆಲ ಕಾಲ ಸ್ವತಂತ್ರವಾಯಿತು. ನೂರಾರು ಪೊಲೀಸ್ ವಲಯಗಳು ಸ್ವತಂತ್ರವಾದವು. ಆದರೆ ಜನರ ಸಂಕಲ್ಪ ಸಾಕಷ್ಟು ಶಕ್ತಿಯುತವಾಗಿತ್ತಾದಾರೂ ಅದರ ಆಯುಷ್ಯ ದೀರ್ಘವಾಗಿರಲಿಲ್ಲ. ಆ ಸಂಕಲ್ಪಕ್ಕೆ ಶಾಶ್ವತ ತೀವ್ರತೆ ಇರಲಿಲ್ಲ.'

ಜನರ ಸಂಕಲ್ಪ ತೀವ್ರತೆ ಕಳೆದುಕೊಂಡರೂ ಕ್ವಿಟ್ ಇಂಡಿಯಾ ಚಳುವಳಿ ದೇಶದಾದ್ಯಂತ ಬರೆದಿದ್ದ ದಿಟ್ಟ ಗೋಡೆ ಬರಹ ನೇರವಾಗಿತ್ತು; ಸ್ಪಷ್ಟವಾಗಿತ್ತು: ಎಲ್ಲ ನಾಯಕರನ್ನೂ ಜೈಲಿಗೆ ಹಾಕಿದರೂ ಭಾರತದ ಜನ ಬಗ್ಗುವುದಿಲ್ಲ; ಬ್ರಿಟಿಷರು ಭಾರತ ಬಿಟ್ಟು ಹೋಗುವವರೆಗೂ ಜನ ಅವರನ್ನು ಬಿಡುವುದಿಲ್ಲ!

ಇಷ್ಟಾಗಿಯೂ, ಕ್ವಿಟ್ ಇಂಡಿಯಾ ಚಳುವಳಿಗಿಂತ ಮೊದಲಿನ ಸ್ವಾತಂತ್ರ್ಯ ಚಳುವಳಿಯ ಮುಕ್ತ ಕ್ರಿಯೆ, ಪ್ರಚಾರ, ಭಾಷಣಗಳಿಗೆ ಒಗ್ಗಿದ್ದ ಲೋಹಿಯಾರ ಮನೋಧರ್ಮಕ್ಕೆ ಭೂಗತ ಚಟುವಟಿಕೆ ಪೂರಾ ಒಗ್ಗಿರಲಿಲ್ಲ. ವೇಷ ಮರೆಸಿಕೊಂಡು ಆಗಾಗ್ಗೆ ಸುಳ್ಳು ಹೇಳಬೇಕಾಗುತ್ತಿದ್ದ ಬಗ್ಗೆ ಲೋಹಿಯಾ ಮನಸ್ಸಿನಲ್ಲಿ ಕಸಿವಿಸಿ, ಮುಜುಗರ ಮೂಡತೊಡಗಿದ್ದವು. ಆ ಕಾರಣಕ್ಕೋ ಏನೋ, ಲೋಹಿಯಾ ಆಳವಾಗಿ ತೊಡಗುವ ತೀವ್ರ ಬೌದ್ಧಿಕ ಕೆಲಸವೊಂದನ್ನು ಆರಂಭಿಸಿದರು: ಮಾರ್ಕ್ಸ್‌ವಾದ ಕುರಿತು ಜರ್ಮನಿಯಲ್ಲಿದ್ದ ಕಾಲದಿಂದಲೂ ತಮ್ಮೊಳಗೆ ಬೆಳೆಯುತ್ತಿದ್ದ ಗ್ರಹಿಕೆಗಳನ್ನು ಬರೆಯಲು ಶುರು ಮಾಡಿದರು. ಆ ಕಾಲದಲ್ಲಿ ಭಾರತದ ಕಮ್ಯುನಿಸ್ಟರ ರಾಜಕೀಯ ನಡೆಗಳ ಬಗೆಗೆ ಲೋಹಿಯಾರಲ್ಲಿ ಹುಟ್ಟಿದ್ದ ಭಿನ್ನಮತಗಳು ಕೂಡ ಅವರನ್ನು ಕೆಣಕಿ ಈ ಮಹತ್ವದ ಕೆಲಸವನ್ನು ಕೈಗೆತ್ತಿಕೊಳ್ಳುವಂತೆ ಮಾಡಿದ್ದವು.

ಆದರೆ ಯಾವುದೇ ಗಂಭೀರವಾದ ಬರವಣಿಗೆಯಲ್ಲಿ ತೊಡಗಿದವರಲ್ಲಿ ಉದ್ದೀಪನಗೊಳ್ಳುವ ಆಳದ ಪ್ರಾಮಾಣಿಕತೆ ಬರವಣಿಗೆಯ ಮೂಲ ಉದ್ದೇಶ, ದಿಕ್ಕುಗಳನ್ನೇ ಬದಲಿಸಬಲ್ಲದು! ಬರವಣಿಗೆಯ ಕ್ರಿಯೆಯೇ ಬರೆವವರನ್ನು ಮತ್ತೊಂದು ದಿಕ್ಕಿಗೆ ಒಯ್ಯಬಲ್ಲದು. ಬರವಣಿಗೆಗೆ ಇಳಿದ ಲೋಹಿಯಾರಂಥ ಗಂಭೀರ ಲೇಖಕನಿಗೆ ಹೀಗಾಗಿದ್ದು ತೀರಾ ಸಹಜವಾಗಿತ್ತು. ಭೂಗತ ಚಟುವಟಿಕೆಯ ನಡುವೆ ಸೃಷ್ಟಿಯಾದ ವಿಚಿತ್ರ ಏಕಾಂತದಲ್ಲಿ ಶುರುವಾದ ಈ ಬರವಣಿಗೆಯ ಕಾಲ, ಹಿನ್ನೆಲೆ ಕುರಿತು ಲೋಹಿಯಾ ಬರೆಯುತ್ತಾರೆ:

'ಬ್ರಿಟಿಷ್ ಆಳ್ವಿಕೆಯ ವಿರುದ್ಧ ನೇರ ಬಂಡಾಯ ನಡೆಯುತ್ತಿದ್ದ 1942–43ರ ಅವಧಿಯಲ್ಲಿ ಸಮಾಜವಾದಿಗಳು ಜೈಲಿನಲ್ಲಿದ್ದರು ಅಥವಾ ಬ್ರಿಟಿಷರ ಬೇಟೆಗೊಳಗಾಗಿದ್ದರು. ಕಮ್ಯುನಿಸ್ಟರು ತಮ್ಮ 'ಪೀಪಲ್ಸ್ ವಾರ್' ಅನ್ನು ವಿದೇಶಿ ಪ್ರಭುಗಳ ಜೊತೆಗೂಡಿ ನಡೆಸುತ್ತಿದ್ದರು.ಆ ಕಾಲದಲ್ಲಿ ತನ್ನ ಅಗಾಧ ವೈರುಧ್ಯಮಯ ಪ್ರಯೋಗಗಳಿಂದ ಮಾರ್ಕ್ಸ್‌ವಾದ ನನ್ನಲ್ಲಿ ಗಾಬರಿ ಹುಟ್ಟಿಸಿತು. ಮಾರ್ಕ್ಸ್‌ವಾದದ ಸತ್ಯವನ್ನು ಮರಳಿ ಪಡೆದುಕೊಂಡು, ಅದರಲ್ಲಿರುವ ಅಸತ್ಯವನ್ನು ಹೊಡೆದು ಹಾಕಬೇಕೆಂಬ ಹಂಬಲ ನನ್ನಲ್ಲಿ ಹುಟ್ಟಿತು.'

'ಮಾರ್ಕ್ಸ್ ನಂತರದ ಅರ್ಥಶಾಸ್ತ್ರ' ಎಂಬ ಈ ಸುದೀರ್ಘ ಬರವಣಿಗೆ ಬೆಳೆದಂತೆಲ್ಲ ಮಾರ್ಕ್ಸ್‌ವಾದ ಕುರಿತ ಲೋಹಿಯಾರ ಸಹಮತ, ಪ್ರಾಮಾಣಿಕ ಸಂದೇಹ, ಟೀಕೆ ಟಿಪ್ಪಣಿಗಳು ಗಂಭೀರ ಥೀಸಿಸ್ ಆಗಿ ಬೆಳೆಯತೊಡಗಿದವು. ಆಧಾರ ಗ್ರಂಥಗಳು ಸುಲಭವಾಗಿ ಸಿಕ್ಕದ ಭೂಗತ ಕಾಲದಲ್ಲಿನ ಲೋಹಿಯಾರ ಈ ಪ್ರಬುದ್ಧ ಅಕಡೆಮಿಕ್ ಬರವಣಿಗೆ ವಿಸ್ಮಯ ಹುಟ್ಟಿಸುತ್ತದೆ.

ಈ ಬರಹದ ಆಯ್ದ ಭಾಗಗಳನ್ನು ಹಾಗೂ ಲೋಹಿಯಾರ ಮುಖ್ಯ ಚಿಂತನೆಗಳನ್ನು ಲೋಹಿಯಾರಿಂದ ಪ್ರೇರಣೆ ಪಡೆದ ಕನ್ನಡದ ಇಬ್ಬರು ಮುಂಚೂಣಿ ಸಮಾಜವಾದಿಗಳಾದ ಪೂರ್ಣಚಂದ್ರ ತೇಜಸ್ವಿ ಹಾಗೂ ಎಂ.ಡಿ. ನಂಜುಂಡಸ್ವಾಮಿ ಕನ್ನಡಿಸಿದರು; 1974ರ ಕೊನೆಗೆ ಬಿ.ಎನ್. ಶ್ರೀರಾಮ್, ಪ. ಮಲ್ಲೇಶ್ 'ಲೋಹಿಯಾ' ರೆಡ್ ಬುಕ್ ಎಂಬ ಈ ಚಾರಿತ್ರಿಕ ಪುಸ್ತಕವನ್ನು ಪ್ರಕಟಿಸಿದರು. ಇದಕ್ಕೆ ಮಾವೋನ ರೆಡ್ ಬುಕ್ ಮಾದರಿಯಾಗಿತ್ತು. ಎರಡು ರೂಪಾಯಿ ಬೆಲೆಯ ಈ ಪುಟ್ಟ ಪುಸ್ತಕ ಕರ್ನಾಟಕದ ಊರೂರುಗಳನ್ನು ತಲುಪಿತು.

ಲೋಹಿಯಾ 'ರೆಡ್ ಬುಕ್'ನಲ್ಲಿರುವ ಮಾರ್ಕ್ಸ್ ನಂತರದ ಅರ್ಥಶಾಸ್ತ್ರ'ದ ಆರಂಭದ ಭಾಗ ಇದು:

'ಕಮ್ಯುನಿಸಂ ಒಂದು ಸಾಮಾಜಿಕ ನ್ಯಾಯದ ಕಾರ್ಯಕ್ರಮದ ಭಾಗವಾಗಿ ಆರಂಭವಾಯಿತು. ಅದರ ಮೂಲೋದ್ದೇಶ ವರ್ಗರಹಿತ ಸಮಾಜದ ನಿರ್ಮಾಣ. ಸಾಮಾಜಿಕ ನ್ಯಾಯದ ಉದ್ದೇಶವುಳ್ಳ ಇತರ ಕಾರ್ಯಕ್ರಮಗಳಿಗೆ ಆಗಿರುವಂತೆಯೇ 'ಎಲ್ಲ ಶ್ರೇಷ್ಠ ಕಾರ್ಯಕ್ರಮಗಳೂ ಅಸಂಭವನೀಯ, ಅಸಾಧ್ಯ' ಎಂದು ತಿರಸ್ಕರಿಸುವವರ ಅಜ್ಞಾನ ಮತ್ತು ವ್ಯಂಗ್ಯಗಳಿಗೆ ಕಮ್ಯುನಿಸಂ ಕೂಡ ಆರಂಭದಲ್ಲಿ ಗುರಿಯಾಯಿತು. ಅದಕ್ಕಾಗಿಯೇ ಕಮ್ಯುನಿಸಂ